# 1

ಮನವಾಳನ್‌ಗೆ ಅರೆಬರೆ ಎಚ್ಚರವಾದಾಗ ಕಾರು ಮುಖ್ಯರಸ್ತೆಯಿಂದ ಕ್ವಾರಿಯ ಕಿರು ರಸ್ತೆಗೆ ತಿರುಗಿಕೊಳ್ಳುತ್ತಿತ್ತು. ಆ ರಸ್ತೆಯನ್ನು ನೋಡುತ್ತಲೇ ಅವನೊಳಗಿನ ಜಾಗರಿಕೆಯು ಚಕ್ಕನೆ ಮಾಯವಾಗಿ ಮೈಯ್ಯೆಲ್ಲಾ ಕಣ್ಣಾದ. ಅದು ಕ್ವಾರಿಯಿಂದ ಫ್ಯಾಕ್ಟರಿಗೆ ಲಾರಿಗಳ ಓಡಾಟಕ್ಕಾಗಿ ಸಿಮೆಂಟಿನಿಂದ ಮಾಡಿದ್ದ ಹಳೆಯ ರಸ್ತೆ. ರಿಪೇರಿಯನ್ನು ಕಂಡು ಸುಮಾರು ವರ್ಷಗಳೇ ಕಳೆದಿದ್ದ ಅದರ ಗುಂಡಿಗಳಲ್ಲಿ ರಾತ್ರಿ ಸುರಿದಿದ್ದ ಮಳೆಯ ನೀರು ನಿಂತು, ಅವು ಮಧ್ಯಾಹ್ನದ ಬಿಸಿಲಿಗೆ ಕನ್ನಡಿಗಳಾಗಿದ್ದವು. ರಸ್ತೆಯ ಇಕ್ಕೆಲಗಳಲ್ಲೂ ಯದ್ವಾತದ್ವಾ ಬೆಳೆದಿದ್ದ ಬೇಲಿಯ ಗಿಡಗಳು ರಸ್ತೆಯ ಅಗಲವನ್ನು ಕುಗ್ಗಿಸಿದ್ದವು. ಆ ಬೇಲಿಯೊಳಗೆ ಮೈತುಂಬಾ ಥರಾವರಿ ಬಣ್ಣಗಳ ಹೂವರಳಿಸಿಕೊಂಡು ಬೆಳಗುತ್ತಿದ್ದ ರೋಜಾಲದ ಗಿಡಗಳ ಮೇಲೆ ಬೆಳಕಿನ ಹಕ್ಕಿಯೊಂದಿಗೆ ಪುಟಾಣಿ ಹಕ್ಕಿಗಳು ಕೂರುವ, ಮುಟ್ಟುವ ಆಟದಲ್ಲಿ ಮುಳುಗಿದ್ದವು. ಅವುಗಳೊಂದಿಗೆ ಜೇನು ಹುಳುಗಳೂ ಝೇಂಕರಿಸುತ್ತಾ ಪುಳುಗುಡುತ್ತಿದ್ದವು. ಜೇನಿನ ಝೇಂಕಾರ, ಹಕ್ಕಿಗಳ ಚಿಲಿಗುಟ್ಟುವಿಕೆ ಎರಡೂ ಒಗ್ಗೂಡಿ ಮಟಮಟ ಮಧ್ಯಾಹ್ನದ ಬಿಸಿಲ ರಾಗವಾಗಿದ್ದವು. ಮನವಾಳನ್ ಕಿಟಕಿಯ ಗಾಜನ್ನು ಕೆಳಗಿಸಿದ. ಬಿಸಿಲಿನೊಂದಿಗೆ ಬೀಸುತ್ತಿದ್ದ ತಂಗಾಳಿ ಒಮ್ಮೆಗೇ ಮನವಾಳನ್ನನ ಮುಖವನ್ನು ಸವರಿಕೊಂಡು ಕಾರೊಳಗಿನ ಎ.ಸಿ.ಯ ತಂಪಿನೊಂದಿಗೆ ತಂಗಿತು.

ರಸ್ತೆ ಸೀದಾ ಕಾಡೊಂದರ ಎದೆಗೇ ಜಾರುತ್ತಿದೆಯೇನೋ ಎಂಬಂತೆ ಕಾರು ಇಳಿಜಾರೊಂದನ್ನು ಇಳಿಯುತ್ತಿತ್ತು. ಹಾದಿಬದಿಯ ಮರಗಳಿಂದಾಗಿ ಪೂರಾ ರಸ್ತೆ ನೆಳಲುಮಯವಾಗಿತ್ತು. ದೂರದಲ್ಲೆಲ್ಲೋ ದನ, ಕುರಿಗಳನ್ನು ಮೇಸಲೆಂದು ಬಂದಿದ್ದವರ ಕೂಗು ಪ್ರತಿ ಕೂಗು, ಅಲ್ಲೊಂದು ಇಲ್ಲೊಂದು ಹಕ್ಕಿಗಳ ಕೂಗುಗಳನ್ನು ಬಿಟ್ಟರೆ ಸಕಲವೂ ಮೌನದ ಹಂಗಿನಲ್ಲಿತ್ತು. ಕಾರು ಒಂದಷ್ಟು ದೂರ ಸಾಗಿತ್ತು. ಅದೊಂದು ಜಾಗದಲ್ಲಿ ಮನವಾಳನ್ ಇದ್ದಕ್ಕಿದ್ದಂತೆ ಕಾರನ್ನು ನಿಲ್ಲಿಸಲು ಹೇಳಿ ಕೆಳಗಿಳಿದು ದಾರಿಯ ಪಕ್ಕದಲ್ಲಿದ್ದ ಪುಟ್ಟ ಸೇತುವೆಯ ದಿಂಡಿನತ್ತ ನಡೆದ. ಮಂಡಿಯೆತ್ತರಕ್ಕಿದ್ದ ಆ ತರಕಲು ದಿಂಡು ಅಲ್ಲಲ್ಲಿ ಹಾಳಾಗಿತ್ತು. ಆ ಇಡೀ ಸೇತುವೆ ಒಡಪಟ್ಟಿಗೆ ಕಾಣದಂತೆ ನಾಯಿನೇರಳೆಯ ಮರದ ದೊಡ್ಡ ಕೊಂಬೆಯೊಂದು ಅದನ್ನು ಕವುಕಂಡಿತ್ತು. ಹೋಗೋಗುತ್ತಾ ಕೈಗೆಟುಕುತ್ತಿದ್ದ ನೇರಳೆ ಮರದ ಪುಟಾಣಿ ಕೊಂಬೆಯೊಂದನ್ನು ಹಿಡಿದು ಜಗ್ಗಿಸಿಕೊಂಡು, ಇನ್ನೇನು ಹಣ್ಣಾಗುವ ಹಂತದಲ್ಲಿದ್ದ ಕೆಂಗುಗಳನ್ನೊಮ್ಮೆ ಹಿಸುಕಿ ನೋಡಿ, ನಂತರ ಕೊಂಬೆಯನ್ನು ಕೈ ಬಿಟ್ಟು, ಸೇತುವೆಯ ದಿಂಡಿನ ಮೇಲೆ ಕೂತು ಸುತ್ತಲೂ ಕಣ್ಣಾಡಿಸಿ, ಕಡೆಗೊಮ್ಮೆ ಅದರ ಹಿಂಬದಿಗೆ ಬಗ್ಗಿದ. ಅದೆಷ್ಟೋ ವರ್ಷಗಳ ಹಿಂದೆ ಕೆತ್ತಿದ್ದ ತನ್ನ ಮತ್ತು ಪೂಂಗೊಡಿಯ ಹೆಸರುಗಳ ಮೇಲೆ ಪಾಚಿ ಕಟ್ಟಿ, ಸಣ್ಣ ಹುಲ್ಲು ಬೆಳೆದದ್ದು ಬಿಟ್ಟರೆ ಒಂಚೂರೂ ಮುಕ್ಕಾಗದೆ ಹಾಗೇ ಇದ್ದದ್ದ ಕಂಡು, ಥಕ್ಕನೆ ಪುಳಕವೊಂದು ಅವನೊಳಗಾಡತೊಡಗಿ ಕಣ್ಣುಗಳು ಮಿಂಚಿದವು. ಮನವಾಳನ್‌ಗೆ ಅವುಗಳನ್ನೊಮ್ಮೆ ಮುಟ್ಟವಾಸೆಯಾಗಿ ಎದ್ದು, ಗಿಡಗಂಟೆಗಳನ್ನು ವಾರಾಗಿಸಿಕೊಂಡು, ಸೇತುವೆಗಿದ್ದ ಒಂಟಿ ನೀರಿನ ಕಣ್ಣಿನತ್ತ ಇಳಿದ. ಎದುರಿಗೆ ಕೊಂಚ ದೂರದಲ್ಲಿ ಕೊರಕಲಿನ ದಡದಲ್ಲಿದ್ದ ಆಳೆತ್ತರದ ಕಾರೇಗಿಡ ಕಾಣುತ್ತಲಿತ್ತು. ಅದರ ತುಂಬಾ ಬಂಗಾರದ ಬಣ್ಣದ ಕಾಯಿಗಳು ಮರಗಳ ಎಲೆಗಳ ಸಂಧಿನಿಂದ ಆಟೋ ಈಟೋ ಬೀಳುತ್ತಿದ್ದ ಬಿಸಿಲಿನಲ್ಲಿ ಫಳಾರಿಸುತ್ತಿದ್ದವು. ಪೂಂಗೊಡಿ ಕಾರೆಹಣ್ಣುಗಳನ್ನು ಬಗಸಿಕೊಂಡು ತಿನ್ನುತ್ತಿದ್ದುದು ನೆನಪಾಯ್ತು. ಮನವಾಳನ್ ಅಲ್ಲಿಂದ ಸೀದಾ ಕಾರೇಗಿಡದ ಹತ್ತಿರಕ್ಕೆ ನಡೆದು, ಒಂದಷ್ಟು ಕಾಯಿಗಳನ್ನು ಕಿತ್ತು ಕೋಟಿನ ಜೇಬಿಗಾಕಿಕೊಂಡು, ತಿರುಗಿ ಸೇತುವೆಯ ಕಣ್ಣಿನತ್ತ ಬಂದು, ಬಲಭಾಗದಲ್ಲಿ ಕೈಗೆಟಕುವ ಎತ್ತರದಲ್ಲಿ ಒತ್ತಟ್ಟಿಗೆ ತನ್ನ ಮತ್ತು ಪೂಂಗೊಡಿಯ ಹೆಸರುಗಳನ್ನೇ ದಿಟ್ಟಿಸಿದ. 'ನಾವು ಸತ್ರೂ ಇವು